ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖಾ ಸಚಿವರು).—

(ಅ) ತಲಾ ೨ ಗ್ಯಾಲನ್ ಅಥವಾ ೯ ಲೀಟರ್‌ಗಳು,

(ಆ) ನಿಜ

(ಇ) ಇಲ್ಲ.

(ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ:

(ಉ) ಹೌದು. ಗ್ರಾಮದ ಪರಿಸ್ಥಿತಿ ಗಮನಿಸಿ ಗಮೀನಹಳ್ಳಿ ಗ್ರಾಮದ ಬದಲು ಭೂವನಹಳ್ಳಿ ಗ್ರಾಮದ ಕುಡಿಯುವ ನೀರಿನ ಯೋಜನೆಯನ್ನು ಅಭಿವೃದ್ಧಿಪಡಿಸಬೇಕೆಂದು ಹಾಸನ ಜಿಲ್ಲಾಪರಿಷತ್ತು ಕೋರಿದ್ದಾರೆ.

(ಊ) ಭೂವನಹಳ್ಳಿ ಗ್ರಾಮದಲ್ಲಿ ದಿನ ಒಂದಕ್ಕೆ ಒಬ್ಬರಿಗೆ ೪ ಗ್ಯಾಲನ್ (೧೯ ಲೀಟರ್) ನೀರು ಲಭ್ಯವಿದೆ:

(ಋ) ಹಾಸನ ಜಿಲ್ಲಾ ಪರಿಷತ್ ಅವರ ಕೋರಿಕೆ ಮೇರೆಗೆ ಭೂವನಹಳ್ಳಿ ಗ್ರಾಮಕ್ಕೆ ನೀರು ಸರಬರಾಜು ಯೋಜನೆಯನ್ನು ೧೯೯೦-೯೧ನೇ ಸಾಲಿನ ಅನುಬಂಧ-೩ ನಲ್ಲಿ ಸೇರಿಸಲಾಗಿದೆ. ಆದ್ದರಿಂದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಹಾಸನ ಕ್ಷೇತ್ರ ದೊಡ್ಡಬಸವನಹಳ್ಳಿ ಹಾಗೂ ಇತರ ೧೦ ಹಳ್ಳಿಗಳಿಗೆ ನೀರಿನ ತೊಂದರೆ ತಪ್ಪಿಸುವ ಬಗ್ಗೆ

೧೬೦. ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ),—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಹಾಸನ ಕ್ಷೇತ್ರ.—೧. ದೊಡ್ಡಬಸವನಹಳ್ಳಿ, ೨. ಕೆ. ಹಿರಿಹಳ್ಳಿ, ೩. ಗುಡುಗನಹಳ್ಳಿ ೪. ಕಣಿವೆಆಲದಹಳ್ಳಿ, ೫. ಜನಿವಾರ, ೬. ಎರೆಹಳ್ಳಿ, ೭. ಶಂಕರನಹಳ್ಳಿ, ೮. ಕಾರೆಕೆರೆ ೯. ಕೆಂಚಟಹಳ್ಳಿ, ೧೦. ಚಿಕ್ಕಗೇಣಿಗೆರೆ ಮತ್ತು ೧೧. ಗೇಶರವಳ್ಳಿ ಗ್ರಾಮಗಳಿಗೆ ಕುಡಿಯುವ ನೀರಿಗೆ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯ ?

(ಆ) ಈ ಗ್ರಾಮಗಳಿಗೆ ಮಿನಿ ನೀರಿನ ಯೋಜನೆಗಳನ್ನು ಕಾರ್ಯಗತ ಮಾಡಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖಾ ಸಚಿವರು).—

(ಅ) ಹೌದು.

(ಆ) ೧೯೯೦-೯೧ನೇ ಸಾಲಿನ ನಿಯಮಾವಳಿಗಳ ಪ್ರಕಾರ ಎ. ಗುಡುಗನಹಳ್ಳಿ ಮತ್ತು ಶಂಕರನಹಳ್ಳಿ ಈ ಹಳ್ಳಿಗಳು ಮಾತ್ರ ಕಿರು ನೀರು ಸರಬರಾಜು ಯೋಜನೆಗೆ ಅರ್ಹತೆ ಹೊಂದಿರುತ್ತದೆ. ೧೯೯೧-೯೨ರಲ್ಲಿ ಹಣವು ಒದಗಿದಲ್ಲಿ ಈ ಹಳ್ಳಿಗಳಿಗೆ ಕಿರು ನೀರು ಸರಬರಾಜು ಯೋಜನೆಗಳನ್ನು ತೆಗೆದು ಕೊಳ್ಳುವ ಬಗ್ಗೆ ಪರಿಶೀಲಿಸಲು ಜಿಲ್ಲಾಪರಿಷತ್ತನ್ನು ಕೇಳಲಾಗುವುದು.

ಅಧ್ಯಕ್ಷರು:—ಸಭೆಯು ಮಂಡಿಸಲಾಯಿತು.

ಡೀಸೆಲ್ ಮತ್ತು ಪೆಟ್ರೋಲ್ ಅಭಾವದಿಂದ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆ

ಅಧ್ಯಕ್ಷರು:—ಮಾನ್ಯ ಶಿವರಾಮೇಗೌಡರೆ, ತಾವು ಏನು ಹೇಳಬೇಕೋ ಅದನ್ನು ಹೇಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಪೆಟ್ರೋಲ್ ಮತ್ತು ಡೀಸೆಲ್ ಅಭಾವದಿಂದ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಎನ್ನುವುದರ ಬಗ್ಗೆ ಹೇಳಿಕೆಯನ್ನು ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ ಹರ್ಷಕುಮಾರ ಗೌಡ.—ಕಾಳಸಂತೆಯಲ್ಲಿ ಡೀಸೆಲ್ ಮಾರಾಟವಾಗುತ್ತಿದೆ. ರೈತರು ಶೋಷಣೆಗೆ ಒಳಗಾಗಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಕಾಳಸಂತೆಯಲ್ಲಿ ಡೀಸೆಲ್ ಒಂದು ಲೀಟರ್‌ಗೆ ೧೨ ರೂಪಾಯಿಗಳವರೆಗೆ ಮಾರಾಟವಾಗುತ್ತಿದೆ ಅದರ ಬಗ್ಗೆ ಸರ್ಕಾರ ಏನಾದರೂ ಹೇಳಬೇಕು. ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ಸದನಕ್ಕೆ ತಿಳಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶಿವರಾಮೇಗೌಡರು ಏನು ಪ್ರಶ್ನೆಯನ್ನು ಎತ್ತಿದ್ದಾರೆ ಅದನ್ನು ಸರ್ಕಾರ ಗಂಭೀರವಾಗಿ ಅರ್ಥ ಮಾಡಿಕೊಂಡಿದೆ. ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಪ್ರಶ್ನೆ ಮಾಡಿರುವುದರಿಂದ, ಅದರ ಬಗ್ಗೆ ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಲಿಖಿತ ಮೂಲಕ ಪ್ರಶ್ನೆ ಮಾಡಿದರೆ ಸರ್ಕಾರ ಲಿಖಿತ ಮೂಲಕ ಉತ್ತರ ಕೊಡುತ್ತದೆ.

(ಗೊಂದಲ)

ಶ್ರೀ ಹರ್ಷಕುಮಾರಗೌಡ.—ಡೀಸೆಲ್ ಮಂತ್ತು ಪೆಟ್ರೋಲ್ ಕಾಳಸಂತೆಯಲ್ಲಿ ಮಾರಾಟ ವಾಗುತ್ತಿದೆ.

ಅಧ್ಯಕ್ಷರು.—ನಾನು ನಿಮ್ಮನ್ನು ಕರೆದಿಲ್ಲ. ಹರ್ಷಕುಮಾರಗೌಡರೇ ತಾವು ದಯವಿಟ್ಟು ಕುಳಿತು ಕೊಳ್ಳಬೇಕು. ೧೫–೧೬ ಜನ ಮಾನ್ಯ ಸದಸ್ಯರುಗಳು ಒಟ್ಟಿಗೆ ನಿಂತು ಮಾತನಾಡಿದರೆ ಯಾರಿಗೆ ಅರ್ಥವಾಗುತ್ತದೆ? ನಾನು ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ. ಈ ಸಮಸ್ಯೆಯ ಗಂಭೀರತೆ ನನಗೆ ತಟ್ಟಿಲ್ಲವೆಂದು ತಿಳಿದುಕೊಂಡಿಲ್ಲ. ನಾನೂ ಸಹ ಗ್ರಾಮಾಂತರ ಪ್ರದೇಶವನ್ನು ಪ್ರತಿನಿಧಿಸತಕ್ಕ ಸದಸ್ಯ.

ಶ್ರೀ ಎಂ.ವಿ. ವೆಂಕಟಪ್ಪ.—ಈ ವಿಷಯದಲ್ಲಿ ಈಗಾಗಲೇ ನಾನು ಗಮನ ಸೆಳೆಯುವ ಸೂಚನೆಯ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ಎಲ್‌ಪಿಜಿ ಗ್ಯಾಸ್, ಪೆಟ್ರೋಲ್, ಡೀಸೆಲ್‌ಗಳ ಅಭಾವದ ಬಗ್ಗೆ ನಾನು ನೋಟೀಸ್ ಕೊಟ್ಟು ನಾಲ್ಕೈದು ದಿವಸಗಳಾಯಿತು.

ಅಧ್ಯಕ್ಷರು —ಗಮನ ಸೆಳೆಯುವ ಸೂಚನೆಯನ್ನು ನೀವು ಶಿವರಾಮೇಗೌಡರು, ಆತ್ಮಾನಂದ ರವರು ಕಳುಹಿಸಿದ್ದಾರೆ. ಅದಕ್ಕೆ ಸಮಯವನ್ನು ಕಾದಿರಿಸಬೇಕಾಗಿದೆ. ಅದನ್ನು ಕಾಲಿಂಗ್ ಅಟೆನ್‌ಷನ್ ಆಗಿ ನಾಳೆ ಅಥವಾ ನಾಡಿದ್ದು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನಾನೊಂದು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇನೆ.

ಅಧ್ಯಕ್ಷರು.—ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಲ್ಲ ಸ್ವಾಮಿ, ರಾಜ್ಯದಲ್ಲಿ ಭೀಕರ ಬರಗಾಲವಿದೆ. ರೈತರು ತಲ್ಲಣಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ರೈತರಿಂದ ಬಲತ್ಕಾರವಾಗಿ ಸಾಲವನ್ನು ವಸೂಲಿ ಮಾಡಲಾಗುತ್ತಿದೆ. ರೈತರ ಬೆಳೆ ನಾಶವಾಗಿದೆ, ಅದಕ್ಕೆ ಪರಿಹಾರ ದೊರಕುತ್ತಿಲ್ಲ. ಕೃಷಿ ಕಾರ್ಮಿಕರಿಗೆ ಉದ್ಯೋಗವಿಲ್ಲ. ಬರಗಾಲ ಕಾಮಗಾರಿ ಪ್ರಾರಂಭವಾಗಿಲ್ಲ. ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ತಾವು ವಿವರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು, ಅದನ್ನು ಅತ್ಯಂತ ವಿವರವಾಗಿ ಚರ್ಚೆ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ.—೧೭–೧೮ನೇ ತಾರೀಖು ಮಳೆ ಬಂದು ನಮ್ಮ ಭಾಗದಲ್ಲಿ ಏಳೆಂಟು ಸಾವಿರ ಕ್ವಿಂಟಾಲ್ ಭತ್ತದ ಬೆಳೆ ನಾಶವಾಗಿದೆ. ಅದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಚರ್ಚೆ ಮಾಡೋಣ.

ಶ್ರೀ ಡಿ ಬಿ. ಚಂದ್ರೇಗೌಡ.—ಸಭೆಯ ಕಾರ್ಯಕಲಾಪ ಸಮಿತಿಯಲ್ಲಿ ಏನು ತೀರ್ಮಾನ ಮಾಡಿದ್ದೇವೆ? ಮಾನ್ಯ ಯಡಿಯೂರಪ್ಪನವರು ಆ ಸಭೆಗೆ ಬಂದಿರಲಿಲ್ಲ. ಮೊದಲನೆಯದಾಗಿ ಕಾನೂನು ಪರಿಸ್ಥಿತಿ, ಎರಡನೆಯದು ಭೀಕರ ಕ್ಷಾಮ, ಮಳೆಯಿಂದ ಆಗಿರತಕ್ಕ ಹಾನಿಯ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇವೆರಡರಲ್ಲಿ ಪ್ರಿಯಾರಿಟಿಯ ಮೇಲೆ ಯಾವುದನ್ನು ಚರ್ಚೆ ಮಾಡಬೇಕೆಂದು ತಾವು ಏನು ತೀರ್ಮಾನ ಮಾಡಿದ್ದೀರಿ ಎಂಬುದನ್ನು ಹೇಳಿದರೆ ಸರಿ ಆಗಬಹುದು.

ಅಧ್ಯಕ್ಷರು.—ಧನ್ಯವಾದಗಳು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಅಧ್ಯಕ್ಷರೆ, ಒಂದು ವಿಚಾರವನ್ನು ಪ್ರಸ್ತಾಪ ಮಾಡಬಹುದು. ಎಂತಹ ಗಂಭೀರವಾದ ವಿಚಾರ ಇದ್ದರೂ ಕೂಡ ಸೆಕ್ರೆಟರಿಯವರು ರಿಪೋರ್ಟ್‌ಗಳನ್ನು ಪ್ರೆಸೆಂಟ್ ಮಾಡಿದ ಮೇಲೆ, ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಿದ ಮೇಲೆ ಜೀರೋ ಆವರ್ ಮುಗಿದುಹೋದರೂ ಕೆಲವು ಸಾರಿ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಬಹುದು. ಆದರೆ ಇವತ್ತು ಏಕೆ ಏನೋ ಎಲ್ಲ ಬಿಟ್ಟು ನಾವು...

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾವು ಹೇಳುತ್ತಿರುವುದು ಗಂಭೀರವಾದ ವಿಷಯ. ಮಾನ್ಯ ಅಧ್ಯಕ್ಷರಿಗೆ ಮನವಟ್ಟಾದಾಗ ಅವರು ಅವಕಾಶ ಮಾಡಿಕೊಟ್ಟಿದ್ದಾರೆ. ಅದನ್ನು ಪ್ರಶ್ನೆ ಮಾಡುತ್ತಿದ್ದೀರಾ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರನ್ನೇ ಪ್ರಶ್ನೆ ಮಾಡಬೇಡಿ. ಅವರ ಅಪ್ಪಣೆ ಪಡೆದೇ ಮಾತನಾಡುತ್ತಿದ್ದೇವೆ.

(ಗೊಂದಲ)

SRI M. VEERAPPA MOILY.—I am very sorry.....

MR. SPEAKER.—I entirely agree with the Parliamentary Affairs Minister.

ಶ್ರೀ ಎಂ. ವೀರಪ್ಪ ಮೊಯಿಲಿ.—I am very sorry. ಏಕೆಂದರೆ ಎಂತಹ ಗಂಭೀರವಾದ ವಿಚಾರ ಇದ್ದರೂ ಕೂಡ, ಸನ್ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ೬ ಗಂಟೆಯ ಮೇಲೆ ಕುಳಿತುಕೊಂಡು ಕೆಲಸ ಮಾಡಿದ್ದಾರೆ. ನಾವು ಸಹ ಇಲ್ಲಿ ೭೨ ರಿಂದ ಕೆಲಸ ಮಾಡುತ್ತಿದ್ದೇವೆ. ಯಾವುದೇ ಸಂದರ್ಭದಲ್ಲಿ, ಎಂತಹ ಒಂದು ವಿಶೇಷವಾದಂಥ ಪ್ರಜೋದನೆ ಇದ್ದರೂ ಕೂಡ ನೋಟಿಫಿಕೇಶನ್‌ಸ್ ಲೇ ಮಾಡಿದ ಮೇಲೆ, ಪೇಪರ್‌ಸ್ ಲೇ ಮಾಡಿದ ಮೇಲೆ ಆಮೇಲೆ ಜೀರೋ ಆವರ್ ಎಂದು ಮಾಡಿದ್ದೇವೆಯೇ ಹೊರತಾಗಿ ಈ ತರಹ ಪ್ರಶ್ನೋತ್ತರ ವೇಳೆ ಆದ ಕೂಡಲೇ ನೋಟಿಫಿಕೇಶನ್‌ಗಳನ್ನು, ಕಾಗದ ಪತ್ರಗಳನ್ನು ಸಭೆಯ ಮುಂದಿಡದೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದಬದ್ದು ನನ್ನ ಗಮನಕ್ಕಂತೂ ಬಂದಿಲ್ಲ. ತಾವು ಉದಾತ್ತ ಭಾವನೆಯಿಂದ ಮಾಡಿದ್ದೀರಿ. ಸ್ವಾಗತ. ಇಂತಹ ಪ್ರಸಂಗ ಮರುಕಳಿಸಬಾರದೆಂದು ನನ್ನ ವಿನಂತಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಹೀಗೆ ನಡೆದ ಅನೇಕ ದಾಖಲೆಗಳು ಇವೆ.

ಅಧ್ಯಕ್ಷರು.—ಮಾನ್ಯ ಸಂಸದೀಯ ಸಚಿವರು ಏನು ಭಾವನೆಗಳಿಗೆ ರೂಪು ಕೊಟ್ಟಿದ್ದಾರೆ ಆದಷ್ಟು ನಾನು ಸಂಪೂರ್ಣವಾಗಿ ಎತ್ತಿಹಿಡಿಯುತ್ತೇನೆ. ಆದರ ಪ್ರಕಾರವೇ ಸದನದ ಕಾರ್ಯಕಲಾಪಗಳು ನಡೆಯಬೇಕಾಗುತ್ತದೆ, ಈಗ ಸಭೆಯ ಮುಂದೆ ಮಂಡಿಸಲಾಗುವ ಕಾಗದಪತ್ರಗಳು

ಸಭೆಯ ಮುಂದೆ ಮಂಡಿಸಲಾದ ಕಾಗದ ಪತ್ರಗಳು

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಎಲ್ಲಾ ಕಾಗದ ಪತ್ರಗಳನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದಿಡುತ್ತೇನೆ.

I. SRI S. BANGARAPPA (Chief Minister).— Sir, I lay following papers on the table of the House:

1. Notification No. HD 303 CNA 90 dated 29th August 1990 Regarding conversion of Touring Cinemas into Semi-permanent Cinemas by Shri Hyder Ali, Proprietor, Nissar Touring Talkies. Yeldur, Srinivasapur Taluk, Kolar District.

2. Notification No. HD 179 CNA 90 dated 6th September 1990 Regarding conversion of Touring Cinemas in to Temporary Cinemas by Sri N. R. Pawar, Proprietor, Sri Jayalakshmi Touring Talkies, Manarayana Palya, Bangalore District.